Q.—463. Sri H. C. LINGA REDDY (Malur).—

Will the Government be pleased to state :—

the steps taken to utilise the land donated under Vidyadan and Bhoodan movement in the State ?

A.—Sri A. G. RAMACHANDRA RAO (Minister for Law and Education).—

The Department has now entrusted the work to a Special Officer *i.e.*, Land Utilisation Officer recently appointed by Government. In the first instance a survey of the acquired lands is being conducted. Cultivation of gift lands has been entrusted to the School Welfare Committees constituted for this purpose. Such Committees have been formed for all the schools. With the participation of local committees in the affairs of the schools, they are expected to be Social Education Centres of the area.

In regard to the cultivation of lands that are not in close proximity to the schools, arrangements are being made for planting fuel trees or to lease them out to the donors for cultivation. The local authorities are taking necessary steps in this behalf. In regard to lands situated within a distance of half a mile from a Primary School, within one mile from a Middle School and within one to one-and-a-half miles from a High School, arrangements are being made to cultivate such lands with the help of students and the staff of the respective schools.

The Government has sanctioned Rs. 1·5 lakhs for purchasing agricultural implements to the schools and another sum of Rs. 1 lakh for other expenses for the year 1955-56. The Implements Factory at Hassan has been requested to manufacture implements to suit the needs of pupils.

Q.—502. Sri D. M. GOVINDARAJU (Nelamangala). —

Will the Government be pleased to state :—

the action taken by them for cultivation of lands granted under Bhoodan-Vidyadan movement ?

A.—Sri A. G. RAMACHANDRA RAO (Minister for Law and Education).—

The Department has now entrusted the work to a Special Officer recently appointed by the Government. In the first instance a survey of the acquired lands is being conducted. Cultivation of gifted lands has been entrusted to the School Welfare Committee constituted for this purpose. Such committees have been formed for all schools. With the participation of local committees in the affairs of the schools, they are expected to be Social Education Centres of the area.

In regard to the cultivation of lands that are not in close proximity to the schools, arrangements are being made for planting fuel trees or to lease them out to the donors for cultivation. The local authorities are taking necessary steps in this behalf. In regard to lands situated within a distance of half, a mile from a Primary School, within one mile from a Middle School and within one to one-and-a-half miles from a High School, arrangements are being made to cultivate such lands with the help of students and the staff of the respective schools.

The Government has sanctioned Rs. 1·5 lakhs for purchasing agricultural implements and another sum of Rs. 1 lakh for other expenses for the year 1955-56. The Implements Factory at Hassan has been requested to manufacture the implements to suit the needs of the pupils.

Sri G. SIVAPPA.—May I know how this amount is utilised or spent ?

*Sri A. G. RAMACHANDRA RAO.—Whichever School Committee has taken it, it has spent it for cultivation purposes.

Sri G. SIVAPPA.—For what purpose is this amount spent ?

Sri A. G. RAMACHANDRA RAO.—Generally for cultivation purpose and in order to protect the draught, they must have used it.

Sri G. SIVAPPA.—May I bring to the notice of the Government that this amount is spent for the purchase of bullocks and carts and manure—all these things ?

Sri A. G. RAMACHANDRA RAO.—We have discouraged the purchasing of bullocks.

Sri G. SIVAPPA.—May I know what is the amount spent this year?

ಶ್ರೀ ಎ. ಜಿ. ರಾಮಚಂದ್ರರಾವ್.—ಬಜೆಟ್ಟಿನಲ್ಲಿ ಎರಡು ಲಕ್ಷ ರೂಪಾಯಿಗಳನ್ನು ಒದಗಿಸಲಾಗಿತ್ತು. ಆದರೆ ಎಷ್ಟು ಖರ್ಚಾಗಿದೆ ಎಂಬ ವಿವರಗಳು ಬಂದಿಲ್ಲ.

Sri G. SIVAPPA.—May I bring it to the notice of Government that the amount allotted this year has lapsed and that no amount has been spent for cultivating land?

Sri A. G. RAMACHANDRA RAO.—Possibly; I have yet to receive figures.

ಶ್ರೀ ವಿ. ವೆಂಕಟಪ್ಪ.—ಈ ಬಗ್ಗೆ ಚನ್ನಪಟ್ಟಣ ತಾಲ್ಲೂಕಿನಲ್ಲಿ ಯಾರಾದರೂ ಜಮೀನನ್ನು ದಾನವಾಗಿ ಕೊಟ್ಟಿದ್ದಾರೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿಚಾರ ಮಾಡಿ ತಿಳಿಸುತ್ತೇನೆ.

ಅಧ್ಯಕ್ಷರು.—ಆ ಬಗ್ಗೆ ಒಂದು ವಿವರವಾದ ನೋಟ್ ಮೆಂಟನ್ನೇ ಕೊಟ್ಟಿದ್ದಾರೆ.

ಶ್ರೀ ವಿ. ವೆಂಕಟಪ್ಪ.—ಆ ಲಿಸ್ಟಿನಲ್ಲಿ ನಮ್ಮ ಚನ್ನಪಟ್ಟಣ ತಾಲ್ಲೂಕಿನ ಹೆಸರೇ ಇಲ್ಲ. ಅದಕ್ಕಾಗಿ ಕೇಳಿದೆನು. ನನಗೆ ಗೊತ್ತಿರುವಂತೆ ಅನೇಕ ಗ್ರಾಮಗಳ ಜನರು ಜಮೀನು ಕೊಟ್ಟಿದ್ದರೂ ಏಕೆ ಈ ತಾಲ್ಲೂಕಿನ ಹೆಸರನ್ನು ತಾವು ಕೈಬಿಟ್ಟಿದ್ದೀರಿ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದೆಲ್ಲಾ ಸರ್ಕಾರದ ಜಮೀನೇ ಎಂದು ಭಾವಿಸಿ ಕೈಬಿಟ್ಟಿದ್ದಾರೆ! (ನಗು).

ಶ್ರೀ ಎ. ಜಿ. ರಾಮಚಂದ್ರರಾವ್.—ಆ ಅಂಶವನ್ನು ವಿಚಾರಮಾಡಿ ತಿಳಿಸುತ್ತೇನೆಂದು ನಾನು ಆಗಲೇ ಹೇಳಿದ್ದೇನೆ.

ಶ್ರೀ ವಿ. ವೆಂಕಟಪ್ಪ.—ತಾವು ಈ ಭೂಮಿಗಳನ್ನು ದಾನವಾಗಿ ಪಡೆಯುವ ಮುಂಚೆ ದಾನಿಗಳಿಗೆ ಆ ಜಮೀನಿನ ಬಗ್ಗೆ ಎಷ್ಟರ ಮಟ್ಟಿಗೆ ಹಕ್ಕಿದೆ ಎಂಬುದನ್ನು ಏನಾದರೂ ಪರಿಶೀಲನೆ ಮಾಡಿ ತೆಗೆದುಕೊಂಡಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಈಗ ಈ ಕೆಲಸವನ್ನು ಲ್ಯಾಂಡ್ ಯೂಟಿಲೈಜೇರ್ಷನ್ ಆಫೀಸರಿಗೆ ವಹಿಸಲಾಗಿದೆ. ಅವರು ಈ ಅಂಶವನ್ನು ವಿದ್ಯಾ ಇಲಾಖೆಯ ಡಿ.ಇ.ಓ. ಅವರ ಸಹಾಯ ಪಡೆದು ನಡೆಸಬೇಕೆಂದು ತಿಳಿಸಿದ್ದೇವೆ. ಈಗ ಅವರು ಈ ಜಮೀನುಗಳ ರಿಜಿಸ್ಟ್ರೇಷನ್ ಮತ್ತು ಇತರ ವಿಧವಾದ ತಕರಾರುಗಳೇನಾದರೂ ಇದ್ದಪಕ್ಷದಲ್ಲಿ ಅವನ್ನೆಲ್ಲಾ ನೋಡಿಕೊಳ್ಳುತ್ತಿದ್ದಾರೆ. ಈಗ ಈ ಎಲ್ಲಾ ವಿಚಾರಗಳ ಪರಿಶೀಲನೆಯೂ ನಡೆಯುತ್ತಿದೆ.

ಶ್ರೀ ವಿ. ವೆಂಕಟಪ್ಪ.—ಹಾಗಾದರೆ ತಾವು ಈ ಜಮೀನುಗಳನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ ಈ ರೀತಿ ಯಾವ ಒಂದು ಪರಿಶೀಲನೆಯನ್ನೂ ನಡೆಸದೆ ಹಾಗೆಯೇ ತೆಗೆದುಕೊಳ್ಳಲಾಗಿದೆ ಎಂದು ಆಯಿತಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಈಗ ಆ ಭೂಮಿಗಳನ್ನೆಲ್ಲಾ ಆ ದಾನಿಗಳು ಕೊಟ್ಟಿರತಕ್ಕ ಭರವಸೆ ಮೇರೆ ತೆಗೆದುಕೊಳ್ಳಲಾಗಿದೆ.

ಶ್ರೀ ವಿ. ವೆಂಕಟಪ್ಪ.—ಹಾಗೆ ದಾನ ಮಾಡತಕ್ಕವರಿಗೆ ಆ ಜಮೀನುಗಳ ಮೇಲೆ ಅಧಿಕಾರವಿದೆಯೇ, ಇಲ್ಲವೇ ಎಂಬುದನ್ನು ಪರಿಶೀಲನೆ ಮಾಡದೆ ಹಾಗೆಯೇ ತೆಗೆದುಕೊಂಡಿಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನು ನ್ನೂಲವಾಗಿ ನೋಡಲಾಗಿದೆ. ಆದರೆ ಒಳಹೊಕ್ಕು ನೋಡಿಲ್ಲ.

Sri H. C. LINGA REDDY.—Are School Welfare Committees functioning already?

Sri A. G. RAMACHANDRA RAO.—Yes.

Sri H. C. LINGA REDDY.—Has it come to the notice of Government that no Committee has been functioning in Kolar District with regard to the utilisation of lands that have been donated?

Sri A. G. RAMACHANDRA RAO.—I will enquire into it. I have no information.

ಶ್ರೀ ಡಿ. ಎಂ. ಗೋವಿಂದರಾಜು.—1955-56ನೇ ಸಾಲಿನಲ್ಲಿ ಈ ಬಾಬಿಗೆಷ್ಟು ಖರ್ಚಾಗಿದೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೋದ ಸಾಲಿನ ಬಜೆಟ್ಟಿನಲ್ಲಿ ಒಂದೂವರೆ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿತ್ತು. ಆದರೆ ಆ ಬಗ್ಗೆ ಎಷ್ಟು ಖರ್ಚಾಗಿದೆ ಎಂಬ ವಿವರಗಳು ನನಗಿನ್ನೂ ಬಂದಿಲ್ಲ. ಅವುಗಳನ್ನು ತರಿಸಿದನಂತರ ತಿಳಿಸಬಲ್ಲೆ.

ಶ್ರೀ ಡಿ. ಎಂ. ಗೋವಿಂದರಾಜು.—ಆ ಪೊಬಲಗನ್ನು ಯಾವ ಉದ್ದೇಶಕ್ಕಾಗಿ ಮೀಸಲಾಗಿಟ್ಟಿದ್ದೀರಿ?

ಶ್ರೀ ಎ. ಜಿ. ರಾಮಚಂದ್ರರಾವ್.—ಬೇಲಿ ಹಾಕುವುದು, ಬೀಜದ ಕಾಳು, ಗೊಬ್ಬರ, ಇತ್ಯಾದಿ, ಕೆಲಸಗಳಿಗೂ ಮತ್ತು ಹತ್ಯಾರುಗಳನ್ನು ತೆಗೆದುಕೊಳ್ಳುವುದಕ್ಕೂ ಒದಗಿಸಲಾಗಿತ್ತು.

ಶ್ರೀ ಡಿ. ಎಂ. ಗೋವಿಂದರಾಜು.—ಈ ಬಗ್ಗೆ ಬಾವಿಗಳನ್ನು ತೋಡಿಸಲು ಹಣವನ್ನು ಮಂಜೂರ್ ಮಾಡಿರಲಿಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ವಿಚಾರ ತಿಳಿಯದು.

ಶ್ರೀ ಡಿ. ಎಂ. ಗೋವಿಂದರಾಜು.—ಬಾವಿಗಳಿಗೆ ತೆಗೆದಿಟ್ಟ ಹಣ ಲ್ಯಾಪ್ಸ್ ಆಗಿಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ವಿಚಾರ ತಿಳಿಯದು.

ಶ್ರೀ ಕೆ. ಲಕ್ಕಪ್ಪ.—ಪೆಲ್‌ಫೇರ್ ಸಮಿತಿಯಲ್ಲಿ ಯಾರಾರಿದ್ದಾರೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಾಮಾನ್ಯವಾಗಿ ಆ ದಾನಿಗಳು, ಗ್ರಾಮದ ಪಟೇಲ್‌ರು ಮತ್ತು ಆ ಸ್ಕೂಲಿನ ಹೆಡ್ಮಾಸ್ಟರುಗಳನ್ನು ಹಾಕಲಾಗಿದೆ.

ಶ್ರೀ ಕೆ. ಲಕ್ಕಪ್ಪ.—ಎತ್ತುಗಳನ್ನು ಕೊಳ್ಳುವುದನ್ನು ತಾವು ಡಿಸ್‌ಕರೇಜ್ ಮಾಡಲಾಗಿದೆ ಎಂದು ಹೇಳಿದಿರಿ. ಯಾವ ಆಧಾರದ ಮೇಲೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ಕೆಲಸವನ್ನು ಆಯಾ ಗ್ರಾಮದ ಜನರ ಸಹಕಾರದಿಂದಲೇ ನಡೆಸಬೇಕೆಂದು ತೀರ್ಮಾನವಾಗಿದೆ. ಆ ಆಧಾರದ ಮೇಲೆ ಹೇಳಿದೆ. ಗ್ರಾಮಗಳ ಪಕ್ಕದಲ್ಲಿರುವ ಜಮೀನನ್ನು ಗೇಣಿಗೆ ಆಯಾಯ ದಾನಿಗಳಿಗೇ ಕೊಟ್ಟು ಅಲ್ಲಿ ಮರಗಳನ್ನು ಬೆಳೆಸುವುದು, ವ್ಯವಸಾಯ ಇತ್ಯಾದಿ ಕಾರ್ಯಗಳನ್ನು ನಡೆಸಬೇಕೆಂದು ಅಭಿಪ್ರಾಯಪಡಲಾಗಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈ ಸಲ ಎಷ್ಟು ದವನ ಬಂದಿದೆ?

ಅಧ್ಯಕ್ಷರು.—ಉತ್ತರದಲ್ಲೇ ತಿಳಿಸಿದ್ದಾರಲ್ಲವೇ ?

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಮುಂದಿನ ಸಾಲಿನ ಪ್ಲಾನಿನ ಬಗ್ಗೆ ಯಾವ ರೀತಿ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೀರಿ ಎನ್ನುವುದನ್ನು ಈ ಸಭೆಗೆ ತಿಳಿಸಲು ಆ ಯೋಜನೆಯನ್ನೇನಾದರೂ ತಯಾರಿಸಿದ್ದರೆ ಅದನ್ನು ಈ ಸಭೆಯ ಮುಂದಿಡಲಾಗುತ್ತದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಈಗ ಲ್ಯಾಂಡ್ ಯೂಟಿಲೈಸೇಷನ್ ಆಫೀಸರನ್ನು ನೇಮಕ ಮಾಡಿದ್ದೇವೆ. ಅವರು ಒಂದೊಂದು ತಾಲ್ಲೂಕಿಗೂ ಹೋಗಿ ಅಲ್ಲಿ ಯಾವ ರೀತಿ ಕಾರ್ಯಕ್ರಮಗಳನ್ನು ನಡೆಸಬೇಕೆಂಬ ಬಗ್ಗೆ ವೆರ್‌ಫೇರ್ ಸಮಿತಿಯವರಿಗೆ ತಿಳಿಸುತ್ತಾರೆ. ಅದರಂತೆ ಅವರು ಮುಂದಿನ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಾರೆ.

ಶ್ರೀ ಬಿ. ಹುಚ್ಚೇಗೌಡ.—ಈಗ ತಾವು ಕೊಟ್ಟಿರತಕ್ಕ ಅಂಕಿಅಂಶಗಳು ಯಾವ ತಾರೀಖಿನವರೆಗೆ ಸಂಗ್ರಹ ಮಾಡಲ್ಪಟ್ಟವುಗಳು ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೋದ ವರ್ಷ ಇದನ್ನು ಪ್ರಾರಂಭಿಸಿದ್ದು. ಈ ವರ್ಷವೇನೂ ನಾವು ಈ ಕಾರ್ಯಕ್ರಮ ಕೈಗೊಂಡಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಈ ವರ್ಷ ಯಾರಾದರೂ ಹೊಸದಾಗಿ ಜಮೀನು ಕೊಟ್ಟರೆ ಅದನ್ನು ತಾವು ತೆಗೆದುಕೊಳ್ಳುವುದಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ತೆಗೆದು ಕೊಳ್ಳುತ್ತೇವೆ.

ಶ್ರೀ ಬಿ. ಹುಚ್ಚೇಗೌಡ.—ಈ ಅಂಕಿ ಅಂಶಗಳೆಲ್ಲಾ ಕಳೆದ ಡಿಸೆಂಬರ್‌ವರೆಗೆ ಕೊಡಲಾಗಿದೆಯೇ ಅಥವಾ ಈ ವರ್ಷದ ಜನವರಿ ಆಖೈರಿನವರೆಗೆ ಕೊಡಲಾಗಿದೆಯೇ ಎಂಬುದನ್ನು ತಿಳಿಸಲು ಸಾಧ್ಯವಿಲ್ಲವೇ ?

ಅಧ್ಯಕ್ಷರು.—ತಮ್ಮ ಪ್ರಶ್ನೆಗೆ ಉತ್ತರ ಒದಗಿಸುವ ವೇಳೆಗೆ ಒದಗಿದಷ್ಟು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—ತುರುವೇಕೆರೆ ತಾಲ್ಲೂಕಿನಲ್ಲಿ 21 ಎಕರೆ ಜಮೀನು ಮಾತ್ರ ತೋರಿಸಿದ್ದೀರಿ. ಆದರೆ ನನಗೆ ಗೊತ್ತಿರುವ ಹಾಗೆ ಒಂದೊಂದು ಹಳ್ಳಿಯಲ್ಲೇ 50-60 ಎಕರೆ ಜಮೀನನ್ನು ಕೊಟ್ಟಿದ್ದಾರೆ. ಹೀಗೆ ತಾವು ತಿಳಿಸಿರುವುದು ಸರಿಯಾಗಿದೆಯೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ವಿಚಾರಿಸುತ್ತೇನೆ.

ಶ್ರೀ ಬಿ. ಹುಚ್ಚೇಗೌಡ.—1955-56ಕ್ಕೆ ಯಾವ ಯಾವ ಬಾಬಿಗೆ ಎಷ್ಟೆಷ್ಟು ದುಡ್ಡನ್ನು ಖರ್ಚು ಮಾಡಲಾಗಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ವಿವರಗಳು ಈಗ ಸದ್ಯಕ್ಕೆ ನನಗೆ ಗೊತ್ತಿಲ್ಲ.

ಶ್ರೀ ಎಸ್. ಗೋಪಾಲಗೌಡ.—ತಮ್ಮ ಲೆಕ್ಕದ ಪ್ರಕಾರ ಸುಮಾರು 52 ಸಾವಿರ ಎಕರೆಯಷ್ಟು ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಿಂದೆ ಒಂದು ಸಾರಿ ಜವಾಬು ಕೊಟ್ಟಾಗ 34 ಸಾವಿರ ಚಿಲ್ಲರೆ ಎಕರೆ ಎಂದು ಹೇಳಿದ ಹಾಗೆ ಜ್ಞಾಪಕವಿದೆ. ಸರಿಯಾಗಿ ಈಗ ಜ್ಞಾಪಕವಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಈ ಜಮೀನುಗಳಿಗೆ ಸಂಬಂಧಪಟ್ಟ ಕಂದಾಯವನ್ನು ಸರ್ಕಾರದವರು ಕೊಡುತ್ತಾರೆಯೋ ಅಥವಾ ದಾನ ಕೊಟ್ಟವರು ಕೊಡುತ್ತಾರೆಯೋ ?

ಶ್ರೀ ಎ. ಜಿ. ರಾಮಚಂದ್ರರಾವ್.—ಜಮೀನು ವಹಿಸಿಕೊಂಡಿರುವುದೆಲ್ಲಾ ಸೂಲ್ ಕಮಿಟಿಯ ಹೆಸರಿನಲ್ಲಿರುತ್ತದೆ; ಅವರು ಕೊಡಬೇಕು.

ಶ್ರೀ ಎಸ್. ಗೋಪಾಲಗೌಡ.—ಎಂದರೆ ಈ ಹಣವನ್ನು ಎಜ್ಯುಕೇರ್ಷ್ ಡಿಪಾರ್ಟ್‌ಮೆಂಟಿನಿಂದ ಟ್ರೈಜರಿಗೇ ಜಮಾ ಮಾಡಿಸುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ. ಆ ಜಮೀನಿನಿಂದ ಏನು ವರಮಾನ ಬರುತ್ತದೆಯೋ ಅದರಲ್ಲಿ ಕಂದಾಯ ಕಟ್ಟಬೇಕು.

ಶ್ರೀ ಎಸ್. ಗೋಪಾಲಗೌಡ.—ನಂಬಂಧಪಟ್ಟ ಸ್ಕೂಲ್ ಕಮಿಟಿಯವರು ತಾನೆ ಈ ಕಂದಾಯ ಕಟ್ಟಬೇಕಾದ್ದು ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀ ಎಸ್. ಗೋಪಾಲಗೌಡ.—ಈಗ ಪ್ರತಿಯೊಂದು ಶಾಲೆಗೂ ಜಮೀನು ದೊರೆತಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಎಸ್. ಗೋಪಾಲಗೌಡ.—ಸುಮಾರು ಎಷ್ಟು ಶಾಲೆಗಳಿಗೆ ಜಮೀನು ದೊರೆತಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸುಮಾರು ಶೇಕಡ 40 ಶಾಲೆಗಳಿಗೆ ದೊರತಿದೆ ಎಂದು ಅಂದಾಜಾಗಿದೆ.

ಶ್ರೀ ಎಸ್. ಗೋಪಾಲಗೌಡ.—ಹಾಗಾದರೆ ಸರ್ಕಾರದ ಅಭಿಪ್ರಾಯ ಎಲ್ಲ ಭೂಮಿ ದೊರತಿದೆಯೋ ಮತ್ತು ಯಾವ ಭೂಮಿ ಸಾಗುವಳಿಗೆ ಯೋಗ್ಯವಾಗಿದೆಯೋ ಅದನ್ನು ಮಾತ್ರ ಸಾಗುವಳಿ ಮಾಡುವುದು, ಬಾಕಿ ಕಡೆ ಹಾಗೆಯೇ ಬಿಡುವುದು ಎಂತಲೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬೇರೆ ಸ್ಕೂಲುಗಳಿಗೆ ಏನು ಮಾಡಬೇಕೆಂಬ ವಿಚಾರ ಸರ್ಕಾರದವರ ಪರಿಶೀಲನೆಯಲ್ಲಿದೆ.

ಶ್ರೀ ಎಸ್. ಗೋಪಾಲಗೌಡ.—ಈಗ ಇರತಕ್ಕಂಥ ಪರಿಸ್ಥಿತಿಯಲ್ಲಿ ಉಪಾಧ್ಯಾಯರುಗಳು ಈ ಭೂಮಿ ಸಾಗುವಳಿ ಮಾಡುವ ಕಡೆಗೆ ಹೆಚ್ಚು ಹೆಚ್ಚು ಗಮನ ಕೊಡಬೇಕು ಎಂದು ಹೇಳಿ ಡಿಪಾರ್ಟ್‌ಮೆಂಟಿನಿಂದ ಸರ್ಕ್ಯುಲರ್‌ಗಳು ಹೋದರೆ ಈ ಪಾಠಶಾಲೆಗಳಲ್ಲಿ ಅವರ ನಿತ್ಯದ ಪಾಠಪ್ರವಚನಗಳಿಗೆ ಹೆಚ್ಚಿನ ಅಡ್ಡಿಯಾಗುವುದಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿದ್ಯಾರ್ಥಿಗಳು ಆ ಪಾಠ ಕಲಿಯಬೇಕೆಂತಲೇ ಆ ಏರ್ಪಾಡು ಮಾಡಿರುವುದು; ಆದ್ದರಿಂದ ಅಡ್ಡಿಯಾಗುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಹಾಗಾದರೆ ಈ ರೀತಿ ವ್ಯವಸಾಯವನ್ನು ಕರಿಕ್ಯುಲಂನಲ್ಲಿ ಒಂದು ಭಾಗವಾಗಿ ಮಾಡಿ ದಿವಸಕ್ಕೆ ಇಷ್ಟು ಘಂಟೆಗಳ ಕಾಲ ವ್ಯವಸಾಯದ ಪಾಠವನ್ನು ಮಾಡಬೇಕೆಂದು ಹೇಳಿ ವಿದ್ಯಾಭ್ಯಾಸದ ಇಲಾಖೆಯವರು ಸರ್ಕ್ಯುಲರ್ ಏನಾದರೂ ಕಳುಹಿಸಿದ್ದಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ರಿಫಾರಂಸ್ ಕಮಿಟಿ ವರದಿಯಲ್ಲಿ ಇದೆ. ಅದನ್ನು ಅವರು ಸಿಲಬಸ್‌ನಲ್ಲಿ ಸೇರಿಸಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಎಂದ ಮೇಲೆ ಈ ವಿದ್ಯಾದಾನ, ಭೂದಾನ ಚಳವಳಿ ಸಂಪೂರ್ಣವಾಗಿ ವಿದ್ಯಾಭ್ಯಾಸದ ಇಲಾಖೆಯ ಸರ್ಕ್ಯುಲರ್ ಪ್ರಕಾರ ನಡೆಯುತ್ತಿಲ್ಲ ಎಂದು ನಾವು ತಿಳಿದುಕೊಳ್ಳೋಣವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದು ಟ್ರಾನ್ಸಿಸಿಷನಲ್ ಪೀರಿಯಡ್; ಆದ್ದರಿಂದ ಈ ರೀತಿ ಮಧ್ಯಸ್ಥನಾಗಿ ನಡೆದುಕೊಂಡು ಬರಬೇಕಾಗುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಈ ಚಳವಳಿಯಲ್ಲಾ ವಿದ್ಯಾದಾನದ ಚಳವಳಿಯನ್ನು ಸೇರಿಸಲಾಗಿದೆಯಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀ ಎಸ್. ಗೊಪಾಲಗೌಡ.—ಈಗ ಚೀಫ್ ಮಿನಿಸ್ಟರ್ ಅವರು ಇಲ್ಲಿ ಯಾವುದೋ ಒಂದು ಸ್ಕೂಲಿನಲ್ಲಿ ಪಾಠ ಹೇಳಿದರು ; ಅದನ್ನು ಇಲ್ಲಿ ಸೇರಿಸಲಾಗಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಈ ವಿದ್ಯಾದಾನ—ಭೂದಾನ ಚಳವಳಿಯನ್ನು ಏಕಕಾಲದಲ್ಲಿ ನಡೆಸುತ್ತೇವೆ.

ಶ್ರೀ ಎಸ್. ಗೋಪಾಲಗೌಡ.—ಆ ರೀತಿ ಯಾರಾದರೂ ಮಂತ್ರಿಗಳೇ ಆಗಲಿ ಇಲಾಖೆಗೆ ಸಂಬಂಧಪಡದಿದ್ದ ಹೊರಗಡೆಯವರೇ ಆಗಲಿ ಇಲಾಖೆಯ ಸರ್ಕ್ಯುಲರ್ ಇದೆ ಎಂದು ಹೇಳಿ ಪಾಠ ಮಾಡುವುದಕ್ಕೆ ಬಂದದ್ದೇ ಆದರೆ, ಅವರು ಯಾವ capacity ಯಲ್ಲಿ ಪಾಠಹೇಳುತ್ತಾರೆ ಎನ್ನುವುದು ತೀರ್ಮಾನವಾಗದೆ, ನನ್ನಂಥವರು ಇಷ್ಟೆಪಟ್ಟು ಸ್ಕೂಲಿಗೆ ಹೋಗಿ ಪಾಠ ಹೇಳುವುದರಿಂದ ಆ ಸ್ಕೂಲಿನ ಉಪಾಧ್ಯಾಯರುಗಳು ಪಾಠ ಹೇಳಿಕೊಡುವುದಕ್ಕೂ ಮತ್ತು ವಿದ್ಯಾಭ್ಯಾಸದ ಕ್ರಮಕ್ಕೂ ಧಕ್ಕೆ ಬರುವುದಿಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಧಕ್ಕೆ ಏನೂ ಬರುವುದಿಲ್ಲ. ವಿದ್ಯಾದಾನ ಮಾಡುತ್ತೇವೆ ಎಂದು ಬರುವವರು, ಅವರು ಯಾವ ವಿಷಯದಲ್ಲಿ ವಿದ್ಯೆಯನ್ನು ಹೇಳಿಕೊಡುವುದಕ್ಕೆ ಸಿದ್ಧವಾಗಿದ್ದಾರೆ ಎಂಬುದನ್ನು ನೋಡಿಕೊಂಡು ಅವರಿಗೆ ಅವಕಾಶ ಕೊಡಲಾಗುತ್ತಿದೆ ಮತ್ತು ಅವರು ಕೊನೆಯಪಕ್ಷ ಒಂದು ವರ್ಷವಾದರೂ ಪಾಠ ಹೇಳಿಕೊಡುವುದಕ್ಕೆ ಒಪ್ಪಿಕೊಳ್ಳಬೇಕು. ಹಾಗಿದ್ದು ಷಕ್ಷದಲ್ಲಿ ಅವರ ಸೇವೆಯನ್ನು ಉಪಯೋಗಿಸಿಕೊಳ್ಳುವುದಕ್ಕೆ ಸರ್ಕಾರದವರು ಯೋಜನೆಮಾಡಿ ಅಂಥವರಿಗೆ ಕಾಗದ ಬರೆಯುತ್ತಾರೆ. ಯಾವ ಅಡ್ಡಿಯೂ ಆಗುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಹಾಗಾದರೆ ಸಂಬಂಧಪಟ್ಟ ಸ್ಕೂಲಿನವರು, ಇಂಥ ವಿಷಯದ ಮೇಲೆ ಪಾಠವನ್ನು ಹೇಳತಕ್ಕದ್ದು ಮತ್ತು ಇಂಥ ಕಾಲದಲ್ಲಿ ಬಂದು ಹೇಳುವುದು ಎನ್ನುವುದನ್ನು ಮೊದಲೇ ತೀರ್ಮಾನಮಾಡಿ ತಿಳಿಸಿ, ಆರೀತಿ ಕಾರ್ಯಕ್ರಮ ನಡೆಯುತ್ತಾ ಇದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು. ಆರೀತಿಯೇ ನಿರ್ಣಯ ಮಾಡುವುದು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಗ್ರಾಮಗಳಲ್ಲಿ ಕೊಟ್ಟಿರತಕ್ಕ ಜಮೀನುಗಳನ್ನು ಆಯಾ ಸ್ಕೂಲಿನ ಹೆಸರಿನಲ್ಲಿ ರಿಜಿಸ್ಟರ್ ಮಾಡಿಸಿ ಕೊಟ್ಟಿದ್ದಾರೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಅನೇಕರು ರಿಜಿಸ್ಟರ್ ಮಾಡಿಸಿಕೊಟ್ಟಿದ್ದಾರೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ದಾನವಾಗಿ ಕೊಟ್ಟಿರುವ ಜಮೀನುಗಳ ಮೇಲೆ ಕಂದಾಯವನ್ನು ವಸೂಲು ಮಾಡುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದರಲ್ಲಿ ತೊಂದರೆ ಏನೂ ಕಾಣಲಿಲ್ಲ ; ಅಂಥ ತೊಂದರೆಯೇನೂ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ದಾನವಾಗಿ ಕೊಟ್ಟಿರುವ ಜಮೀನಿನಲ್ಲಿ ಬೀಳುಬಿದ್ದಿರುವುದೆಷ್ಟು ನಾಗುವಳಿಯಾಗುತ್ತಿರುವುದೆಷ್ಟು ಎಂಬ ವಿವರ ಇದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿವರ ತಿಳಿದು ಹೇಳಬೇಕು.

ಶ್ರೀ ಎಸ್. ಸಿದ್ದಪ್ಪ.—ಈ ಭೂದಾನ—ವಿದ್ಯಾದಾನ ಚಳವಳಿ ವಿಚಾರದಲ್ಲಿ ಇತರ ಸಂಸ್ಥಾನಗಳಿಗಿಂತಲೂ ಮೊದಲನೆಯದಾಗಿ ಒಂದು ಅವಕಾಶವನ್ನು ಕಲ್ಪಿಸಿಕೊಂಡು ಯಶಸ್ವಿಯಾಗಿ ಕೆಲಸಮಾಡಿದ್ದು ಮೈಸೂರು ಸಂಸ್ಥಾನವೇ? ಯಾವುದು ಸ್ವಾಮಿ?

ಶ್ರೀ ಎ. ಜಿ. ರಾಮಚಂದ್ರರಾವ್.—ಇನ್ನಾವ ಸಂಸ್ಥಾನ ಈ ರೀತಿ ಕೆಲಸ ಮಾಡಿದೆ ಎಂಬುದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎಸ್. ಸಿದ್ದಪ್ಪ.—ಇಡೀ ಪ್ರಪಂಚದಲ್ಲಿ ಮೊದಲು ಈ ವಿದ್ಯಾದಾನ, ಭೂದಾನ ಚಳವಳಿಯನ್ನು ನಮ್ಮ ನಾಯಕರು ಈ ನಮ್ಮ ದೇಶದಲ್ಲಿ ಪ್ರಾರಂಭಮಾಡಿದ್ದಾರೆ. ನಮ್ಮ ದೇಶ ವ್ಯವಸಾಯದ ದೇಶ. ಈ ದೇಶದ ವಿದ್ಯಮಾನಕ್ಕನುಗುಣವಾಗಿ ಈ ಕಾರ್ಯಕ್ರಮ ಅತ್ಯುನ್ನತವಾಗಿ ಲಾಭದಾಯಕವಾಗಿದೆಯಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದಕ್ಕೆ ಮೊದಲೇ ಜವಾಬು ಹೇಳಿದ್ದೇನೆ.

ಅಧ್ಯಕ್ಷರು.—ತಮ್ಮ ಪ್ರಶ್ನೆಗೆ ತಾವೇ ಜವಾಬು ಹೇಳಿದ್ದೀರಿ.

ಶ್ರೀ ಎಸ್. ಸಿದ್ದಪ್ಪ.—ಲಾಭದಾಯಕವಾಗಿದೆ ಎಂದರೆ ಏನು ಲುಕ್ಸಾನಾಗುತ್ತದೆ ಸ್ವಾಮಿ?

(ನಭೆಯಲ್ಲಿ ನಗು !)

ಶ್ರೀ ಎ. ಜಿ. ರಾಮಚಂದ್ರರಾವ್.—34 ಸಾವಿರ ಎಕರೆ ಬಂದಿದೆ ಎನ್ನುವುದು ಲಾಭದಾಯಕವೆಂದು ತಮಗೇ ಗೊತ್ತಾಗುತ್ತದೆ.

ಶ್ರೀ ಎಸ್. ಸಿದ್ದಪ್ಪ.—ಹಾಗಾದರೆ ಆ 34 ಸಾವಿರ ಎಕರೆಗೆ ವ್ಯಾಲ್ಯುಯೇಷನ್ ಅಂದಾಜು ಮಾಡಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಮೊದಲೇ ಹೇಳಿದೆ. 50 ಲಕ್ಷ ರೂಪಾಯಿ ಬಾಳಬಹುದು ಎಂದು ಹೇಳಿದ್ದೇನೆ.

ಶ್ರೀ ಸಿ. ಟಿ. ಹನುಮಂತಯ್ಯ.—ಈಗ ವ್ಯವಸಾಯಕ್ಕೆ ಲಾಯಕ್ಕಾಗಿರತಕ್ಕ ಜಮೀನಿನ ಲೆಕ್ಕ ಎಷ್ಟು ಸ್ವಾಮಿ?

ಶ್ರೀ ಎ. ಜಿ. ರಾಮಚಂದ್ರರಾವ್.—ನಮ್ಮ ಅಭಿಪ್ರಾಯದಲ್ಲಿ ದಾನ ಕೊಟ್ಟಿರುವವರೆಲ್ಲರೂ ಸದ್‌ಭಾವನೆಯಿಂದ ಕೊಟ್ಟಿದ್ದಾರೆ. ವ್ಯವಸಾಯಕ್ಕೆ ಲಾಯಕ್ಕಾಗಿದೆ ಎಂದು ಭಾವನೆ.

ಶ್ರೀ ಸಿ. ಟಿ. ಹನುಮಂತಯ್ಯ.—ತಾವು ಪರಿಶೀಲನೆ ಮಾಡಿ ನೋಡಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಪರಿಶೀಲನೆ ಮಾಡಿಯೂ ಇದ್ದೇನೆ.

ಶ್ರೀ ಸಿ. ಟಿ. ಹನುಮಂತಯ್ಯ.—ಆ ಜಮೀನುಗಳ ಕಂದಾಯದ ಬಾಕಿ ಎಷ್ಟಿದೆ ಸ್ವಾಮಿ?

ಅಧ್ಯಕ್ಷರು.—ಬೇರೆ ಪ್ರಶ್ನೆ ಇದ್ದರೆ ಕೇಳಿ.

Devaramaradi Tank, Chicknayakanahalli Taluk.

Q.—642. Sri C. H. LINGADEVARU (Chicknayakanahalli).—

Will the Government be pleased to state :—

(*a*) whether they have sanctioned the construction of Devaramaradi Tank in Chicknayakanahalli Taluk?

(*b*) when this work will be started?